ಒ.ಎಸ್.54/2016

ಪಿ.ಡಬ್ಲ್ಯೂ2 ದಿಃ 16-07-2019

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ವೈ.ಕೆ.ಪಿ ವಕೀಲರಿಂದ

ದಾವಾ ಆಸ್ತಿ ಸರ್ವೆ ನಂ.ರ ಆಸ್ತಿಯನ್ನು ಮರೀಗೌಡ ಮತ್ತು ವೆಂಕಟೇಗೌಡರ ನಡುವೆ ಭಾಗವಾಗುವ ಸಮಯದಲ್ಲಿ ನಾನು ಹಾಜರಿರುವುದಿಲ್ಲ ಎಂದರೆ ಸರಿ. ಮರೀಗೌಡ ಮತ್ತು ವೆಂಕಟೇಗೌಡರ ಹಿಸ್ಸಾ ಬಾಬ್ತು ಚೆಕ್ಕುಬಂದಿ ವೈಯಕ್ತಿಕವಾಗಿ ನನಗೆ ಗೊತ್ತಿರುತ್ತದೆ. ಮರೀಗೌಡನ ಭಾಗದ ಜಮೀನಿನ ಚೆಕ್ಕುಬಂದಿ ಪೂರ್ವಕ್ಕೆಃ ತಿಮ್ಮೇಗೌಡ-ಭೋಜೇಗೌಡರ ಜಮೀನು, ಪಶ್ಚಿಮಕ್ಕೆಃ ರತ್ನಮ್ಮರ ಜಮೀನು, ಉತ್ತರಕ್ಕೆಃ ಮಂಜೇಗೌಡನ ಜಮೀನು, ದಕ್ಷಿಣಕ್ಕೆಃ ಭೋಜೇಗೌಡರ ಜಮೀನು ಇರುತ್ತದೆ. ವೆಂಕಟೇಗೌಡರ ಜಮೀನಿನ ಚೆಕ್ಕುಬಂಧಿ ಪೂರ್ವಕ್ಕೆಃ ಐಯ್ಯಣ್ಣರವರ ಜಮೀನ, ಪಶ್ಚಿಮಕ್ಕೆಃ ರತ್ನಮ್ಮನವರ ಜಮೀನು, ಉತ್ತರಕ್ಕೆಃ ಶಿವೇಗೌಡನ ಜಮೀನು, ದಕ್ಷಿಣಕ್ಕೆಃ ಮರೀಗೌಡನ ಜಮೀನು ಇರುತ್ತದೆ. ಸದರಿ ಆಸ್ತಿಯ ಜಮೀನಿನ ವಿಸ್ತೀರ್ಣ ಸುಮಾರು ಹತ್ತಾರು ಎಕರೆ ಇರುತ್ತದೆ. ಮರೀಗೌಡರು ತನ್ನ ಹಿಸ್ಸಾ ಬಾಬ್ತು ಆಸ್ತಿಯನ್ನು ಭೋಜೇಗೌಡರಿಗೆ ಮಾರಾಟ ಮಾಡಿರುತ್ತಾರೆ. ಪೂರ್ವಕ್ಕೆಃ ಅಣ್ಣೇಗೌಡ-ನಾಗೇಗೌಡ, ಪಶ್ಚಿಮಕ್ಕೆಃ ಮರೀಗೌಡ ಯೋಗೇಶ ಜಮೀನು, ಉತ್ತರಕ್ಕೆಃ ಮರೀಗೌಡ-ವೆಂಕಟೇಗೌಡ , ದಕ್ಷಿಣಕ್ಕೆಃ ನವೀನ್ ಜಮೀನು ಇರುತ್ತದೆ. 1.5 ಎಕರೆ ಜಮೀನನ್ನು ಮರೀಗೌಡರು ಭೋಜೇಗೌಡರಿಗೆ ಮಾರಾಟ ಮಾಡಿದ್ದಾರೆ. ನನಗೆ ದಾವಾಸ್ತಿಯ ಸರ್ವೆ ನಂ.132 ರ ವಿದ್ಯಾಮಾನಗಳು ಯಾವುದು ಗೊತ್ತಿಲ್ಲದಿದ್ದರೂ ಸಹ ವಾದಿಯ ಚಿತ್ತಾವಣೆ ಮೇರೆಗೆ ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ.132/2 ರಲ್ಲಿ ಮರೀಗೌಡ ಮತ್ತು ವೆಂಕಟೇಗೌಡರು 3 ಎಕರೆ 5 ಗುಂಟೆ ಜಮೀನಿನ ಪೈಕಿ ತಲಾ 1 ಎಕರೆ 21 ಗುಂಟೆ ಜಮೀನನ್ನು ಸಮಭಾಗವಾಗಿ ಹಂಚಿಕೊಂಡಿರುತ್ತಾರೆ. ಸರ್ವೆ ನಂ.132/2 ರ ಜಮೀನು ಅಸ್ತಿತ್ವದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಮರೀಗೌಡ ಹಾಗೂ ವೆಂಕಟೇಗೌಡರ ಕುಟುಂಬದ ವಿಧ್ಯಮಾನಗಳು ಗೊತ್ತಿಲ್ಲದಿದ್ದರೂ ಸಹ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರೀಗೌಡರಿಗೆ ಸರ್ವೆ ನಂ.132 ರಲ್ಲಿ 1 ಎಕರೆ 11 ಗುಂಟೆ ಮಾತ್ರ ಅವರ ಹಿಸ್ಸೆಗೆ ಬಂದಿರುತ್ತದೆ ಎಂದರೆ ಸರಿಯಲ್ಲ .

**ಮರುವಿಚಾರಣೆ ಇಲ್ಲ.**

**(ಮುಕ್ತ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಸ.ಇ.ಎ.ಒ**

**3ನೇ ಅಧಿಕ ಸಿವಿಲ್ ಜಡ್ಜ್ ಮತ್ತು**

**ಜೆ.ಎಂ.ಎಫ್.ಸಿ**